# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 72 (798) |
| ಸದಸ್ಯರ ಹೆಸರು | : | ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು) |
| ವಿಷಯ | : | ಬೆಂಗಳೂರು ನಗರ/ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ತಾಣಗಳಅಭಿವೃದ್ಧಿ ಬಗ್ಗೆ. |
| ಉತ್ತರಿಸುವ ದಿನಾಂಕ | : | 25-09-2020. |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ / ಬೆಂಗಳೂರು ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ತಾಣಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು; ಹಾಗೂ ಯಾವ ಯಾವ ಸ್ಥಳಗಳಲ್ಲಿರುತ್ತವೆ; (ವಿವರಗಳನ್ನು ನೀಡುವುದು) | 2015-20 ರ ಪ್ರವಾಸೋದ್ಯಮ ನೀತಿ ಅನ್ವಯ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಇಲಾಖೆಯು ಈ ಕೆಳಕಂಡ 17 ಪ್ರವಾಸಿ ತಾಣಗಳನ್ನು ಗುರುತಿಸಲಾಗಿರುತ್ತದೆ. ವಿವರ ಕೆಳಗಿನಂತಿದೆ:- |

| ಜಿಲ್ಲೆಯ ಹೆಸರು | ತಾಲ್ಲೂಕು | ಗುರುತಿಸಿರುವ ಪ್ರವಾಸಿ ತಾಣಗಳು | ಪ್ರವಾಸಿತಾಣ ಗಳಸಂಖ್ಯೆ |
|---|---|---|---|
| ಬೆಂಗಳೂರು ನಗರ | ಬೆಂಗಳೂರು ಉತ್ತರ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಪೂರ್ವ | ಲಾಲ್‌ಭಾಗ್, ಕಬ್ಬನ್ ಪಾರ್ಕ್, ದೊಡ್ಡ ಬಸವಣ್ಣ ದೇವಸ್ಥಾನ, ಟಿಪ್ಪು ಅರಮನೆ, ಕೋಟೆ, ಸೋಮೇಶ್ವರ ದೇವಸ್ಥಾನ, ಇಸ್ಕಾನ್, ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ | 08 |
| | ಆನೇಕಲ್ | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಮುತ್ಯಾಲಮಡುವು. | 02 |
| ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | ದೇವನಹಳ್ಳಿ, ಟಿಪ್ಪು ಹುಟ್ಟಿದ ಸ್ಥಳ ಮತ್ತು ಕೋಟೆ. | 03 |
| | ದೊಡ್ಡಬಳ್ಳಾಪುರ | ಘಾಟಿ ಸುಬ್ರಮಣ್ಯ ದೇವಸ್ಥಾನ, ಕಣಸವಾಡಿ ಮಧುರೆ ದೇವಸ್ಥಾನ. | 02 |
| | ನೆಲಮಂಗಲ | ಶಿವಗಂಗೆ, ವಿಠಲ ಮಂದಿರ | 02 |
| | | ಒಟ್ಟು: | 17 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಕಳೆದ ಸಾಲಿನಲ್ಲಿ ನಿಗಧಿಪಡಿಸಿ, ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಾಡಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರ / ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬರುವ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ 2019-20ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತೆ ಇರುತ್ತದೆ. |

(ರೂ.ಲಕ್ಷಗಳಲ್ಲಿ)

| ಜಿಲ್ಲೆಗಳ ಹೆಸರು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಬಿಡುಗಡೆ ಮಾಡಿರುವ ಅನುದಾನ |
|---|---|---|---|
| ಬೆಂಗಳೂರು ನಗರ | 10 | 1219.24 | 511.58 |
| ಬೆಂಗಳೂರು ಗ್ರಾಮಾಂತರ | 05 | 400.00 | 191.00 |
| ಒಟ್ಟು | 15 | 1619.24 | 702.58 |

ಜಿಲ್ಲಾವಾರು ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಸದರಿ ಪ್ರವಾಸಿ ತಾಣಗಳ ಸಂರಕ್ಷಣೆಗಾಗಿ ಸರ್ಕಾರ ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ; ಹಾಗಿದ್ದಲ್ಲಿ, ಯಾವ ಯೋಜನೆಯನ್ನು ರೂಪಿಸಲಾಗಿದೆ; | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬರುವ ಪ್ರವಾಸಿ ತಾಣಗಳ ಸಂರಕ್ಷಣೆಗಾಗಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿದೆ.<br><br>ಬೆಂಗಳೂರು ನಗರ ಜಿಲ್ಲೆ<br>1. 2016-17 ನೇ ಬೆಂಗಳೂರು ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಕಿಂಗ್ ಎಡ್ವರ್ಡ್ ಪ್ರತಿಮೆಯ ಸುತ್ತ ಇರುವ ಕಾಂಪೌಂಡ್ ನವೀಕರಣ ಕಾಮಗಾರಿಯನ್ನು ರೂ.34.20 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಮೂಲಕ ಅನುಷ್ಠಾನಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.<br><br>2. 2016-17ನೇ ಸಾಲಿನಲ್ಲಿ ಬೆಂಗಳೂರು ಕೆಂಪೇಗೌಡರ 4 ಕಾವಲು ಗೋಪುರದ ಸಂರಕ್ಷಣಾ ಕಾಮಗಾರಿಯನ್ನು ರೂ.23.30 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಮಂಜೂರಾಗಿರುತ್ತದೆ. ಸದರಿ ಕಾಮಗಾರಿಯನ್ನು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>3. 2016-17ನೇ ಸಾಲಿನಲ್ಲಿ ಬೆಂಗಳೂರು ಬಸವನಗುಡಿಯಲ್ಲಿರುವ ಶ್ರೀ ದೊಡ್ಡ ಬಸವಣ್ಣ ದೇವಾಲಯದ ಸಂರಕ್ಷಣಾ ಕಾಮಗಾರಿಯನ್ನು ರೂ.46.50 ಲಕ್ಷಗಳಲ್ಲಿ ಕೈಗೊಳ್ಳಲು ಮಂಜೂರಾಗಿರುತ್ತದೆ. ಸದರಿ ಕಾಮಗಾರಿಯನ್ನು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>4. 2018-19ನೇ ಸಾಲಿನಲ್ಲಿ ಬೆಂಗಳೂರು ಕಸ್ತೂರಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯ ಕಟ್ಟಡ ಸಂರಕ್ಷಣೆ ಮತ್ತು ನವೀಕರಣ ಕಾಮಗಾರಿಯನ್ನು ರೂ.830.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಈ ಕಾಮಗಾರಿಯನ್ನು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಮುಂದುವರೆದ ಕಾಮಗಾರಿಗಳಿಗೆ ಅನುದಾನವನ್ನು ವಿನಿಯೋಗಿಸ ಬೇಕಾಗಿರುವುದರಿಂದ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಆರ್ಥಿಕ ಇಲಾಖೆಯ ಸಹಮತಿ ಪಡೆದು ಮುಂದಿನ ಕ್ರಮ ವಹಿಸಲಾಗುವುದು.<br><br>ಬೆಂಗಳೂರು ಗ್ರಾಮಾಂತರ<br>1. 2018-19ನೇ ಸಾಲಿನಲ್ಲಿ ದೇವನಹಳ್ಳಿ ಕೋಟೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಯನ್ನು ರೂ.230.00 ಲಕ್ಷಗಳಲ್ಲಿ ಕೈಗೊಳ್ಳಲು ಸರ್ಕಾರ ಮಂಜೂರಾತಿ ನೀಡಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎ.ಎಸ್.ಐ) ಯಿಂದ ಅನುಮತಿ ನಿರೀಕ್ಷಿಸಲಾಗುತ್ತಿದೆ. ಎ.ಎಸ್.ಐ. ಯಿಂದ ಅನುಮತಿ ದೊರೆತ ನಂತರ ಮುಂದಿನ ಕ್ರಮ ವಹಿಸಲಾಗುವುದು. |

....3/

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಸದರಿ ಪ್ರವಾಸಿ ತಾಣಗಳ ಸಂರಕ್ಷಣೆಗಾಗಿ ಇನ್ನು ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರವು ಆಲೋಚಿಸಿದೆಯೇ? | ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ.20.00 ಕೋಟಿ ಅನುದಾನ ಒದಗಿಸಿದ್ದು, ಮುಂದುವರೆದ ಕಾಮಗಾರಿಗಳಿಗೆ ಈ ಅನುದಾನವನ್ನು ವಿನಿಯೋಗಿಸಬೇಕಾಗಿದೆ. ಹೊಸ ಯೋಜನೆ / ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು. |

ಕಡತ ಸಂಖ್ಯೆ: ಟಿಓಆರ್ 184 ಟಿಡಿವಿ 2020

(ಸಿ.ಟಿ.ರವಿ)

ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

# ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 72 (798)ಕ್ಕೆ ಅನುಬಂಧ

## 2019-20ನೇ ಸಾಲಿನಲ್ಲಿ ಬೆಂಗಳೂರು ನಗರ/ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಬಿಡುಗಡೆ/ವೆಚ್ಚ ಮಾಡಿರುವ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | 2019-20 ನೇ ಸಾಲಿನಲ್ಲಿ ಬಿಡುಗಡೆ/ವೆಚ್ಚ ಮಾಡಿರುವ ಅನುದಾನ |
|---|---|---|---|---|---|
| 1 | 2 | 3 | 4 | 5 | 6 |
| | ಬೆಂಗಳೂರು ನಗರ ಜಿಲ್ಲೆ | | | | |
| | ಆನೇಕಲ್ ತಾಲ್ಲೂಕು | | | | |
| 1 | ಬನ್ನೇರುಘಟ್ಟ ಜೈವಿಕ ಉದ್ಯಾನವನ ಪ್ರದೇಶದಲ್ಲಿನ ಆಂತರಿಕ ರಸ್ತೆಗಳ ಅಭಿವೃದ್ಧಿ | 2016-17 ವಿಶೇಷ ಅಭಿವೃದ್ಧಿ ಯೋಜನೆ | 199.25 | (ಕೆ.ಆರ್.ಐ.ಡಿ.ಎಲ್. ಬೆಂಗಳೂರು) | 29.25 |
| 2 | ಆನೇಕಲ್ ವಿಧಾನಸಭಾ ಕ್ಷೇತ್ರದ ಪ್ರಸಿದ್ಧ ಪ್ರವಾಸಿ ತಾಣವಾದ ಮುತ್ಯಾಲಮಡು ಬಳಿ ಪ್ರವಾಸೋದ್ಯಮ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 2017-18 ಬಂಡವಾಳ ವೆಚ್ಚಗಳು | 200.00 | ಕೆ.ಆರ್.ಐ.ಡಿ.ಎಲ್ | 54.00 |
| | ಬೆಂಗಳೂರು ದಕ್ಷಿಣ ತಾಲ್ಲೂಕು | | | | |
| 3 | ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡ ಆಲದಮರ ಪ್ರವಾಸಿ ತಾಣದಲ್ಲಿ ಪ್ರವಾಸಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ. | 2017-18 ಬಂಡವಾಳ ವೆಚ್ಚಗಳು | 99.99 | ಕೆ.ಆರ್.ಐ.ಡಿ.ಎಲ್ | 43.08 |
| 4 | ಬೆಂಗಳೂರು ನಗರ ಜಿಲ್ಲೆಯ ದೊಡ್ಡ ಆಲದಮರ ಪ್ರವಾಸಿ ತಾಣದಲ್ಲಿ ವಿದ್ಯುತ್ ಅಲಂಕಾರ, ಪಾದಚಾರಿ ಮಾರ್ಗ ನಿರ್ಮಾಣ, ತಂತಿ ಬೇಲಿ ಅಳವಡಿಕೆ, ಮಕ್ಕಳ ಆಟದ ಅಂಗಳ ನಿರ್ಮಾಣ, ಸುಸಜ್ಜಿತ ಆಸನಗಳ ವ್ಯವಸ್ಥೆ, ವಿಶ್ರಾಂತಿ ಕೊಠಡಿ, ಸಂಪರ್ಕ ರಸ್ತೆ ಮುಂತಾದ ಕಾಮಗಾರಿಗಳು. | 2018-19 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ.ಎಲ್ | 25.00 |
| 5 | ಬೆಂಗಳೂರು ದಕ್ಷಿಣ ತಾಲ್ಲೂಕು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ಶ್ರೀ ಮಹಾಮೇರು ಪಂಚಗಣಪತಿ ದೇವಾಲಯದ ಬಳಿ ಯಾತ್ರಿನಿವಾಸ ನಿರ್ಮಾಣ. | 2018-19 ಬಂಡವಾಳ ವೆಚ್ಚಗಳು | 75.00 | ಕೆ.ಆರ್.ಐ.ಡಿ.ಎಲ್ | 6.25 |
| 6 | ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿಯ ಮಾರಮ್ಮ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ. | 2019-20 ಬಂಡವಾಳ ವೆಚ್ಚಗಳು | 20.00 | ಕೆ.ಆರ್.ಐ.ಡಿ.ಎಲ್ | 6.00 |
| 7 | ಹಮ್ಮಿಗೆಪುರ ಶ್ರೀ ಗುಟ್ಟೆ ಅಂಜನೇಯ ಸ್ವಾಮಿ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ. | 2019-20 ಬಂಡವಾಳ ವೆಚ್ಚಗಳು | 25.00 | ಕೆ.ಆರ್.ಐ.ಡಿ.ಎಲ್ | 8.00 |
| 8 | ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿರುವ ಕಲಾಗ್ರಾಮದ ಮುಂದುವರೆದ ಕಾಮಗಾರಿಗಳು ಶ್ರೀ ಲಕ್ಷ್ಮೀ ನರಸಿಂಹ | 2019-20 ಬಂಡವಾಳ ವೆಚ್ಚಗಳು | 200.00 | ಜಿಲ್ಲಾ ಪಂಚಾಯಿತಿ (ಪಿ.ಆರ್.ಇ.ಡಿ) | 150.00 |
| | ಬೆಂಗಳೂರು ಉತ್ತರ ತಾಲ್ಲೂಕು | | | | |
| 9 | ಬೆಂಗಳೂರು ನಗರದ ದಸರಹಳ್ಳಿ ಹೋಬಳಿ, ಕಮ್ಮಸಂದ್ರ ಗ್ರಾಮದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ರಸ್ತೆ ಅಭಿವೃದ್ಧಿ ಕಾಮಗಾರಿ. | 2019-20 ಬಂಡವಾಳ ವೆಚ್ಚಗಳು | 200.00 | ಜಿಲ್ಲಾ ಪಂಚಾಯಿತಿ (ಪಿ.ಆರ್.ಇ.ಡಿ) | 150.00 |
| 10 | ಬೆಂಗಳೂರು ನಗರ ಜಿಲ್ಲೆ ಬ್ಯಾಟರಾಯನಪುರ ಅಮೃತಹಳ್ಳಿ ಕೆರೆಯ ಹತ್ತಿರ ಪ್ರವಾಸೋದ್ಯಮ ಮೂಲಭೂತ ಸೌಕರ್ಯಗಳ ಅಭಿವೃದ್ಧಿ. | 2017-18 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ. ಎಲ್ ಬೆಂಗಳೂರು | 40.00 |
| | ಬೆಂಗಳೂರು ನಗರ ಜಿಲ್ಲೆ ಒಟ್ಟು ಮೊತ್ತ | | 1219.24 | | 511.58 |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | 201[illegible] ಸಾ[illegible]ಲಿ ಬಿಡ[illegible]/ವೆಚ್ಚ ಮಾಡಿರುವ ಅನುದಾನ |
|---|---|---|---|---|---|
| 1 | 2 | 3 | 4 | 5 | 6 |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | |
| | ದೇವನಹಳ್ಳಿ ತಾಲ್ಲೂಕು | | | | |
| 11 | ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕುಂದಾಣ ಹೋಬಳಿ, ಕೊಯಿರಾ ಗ್ರಾಮದ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿ | 2018-19 ಬಂಡವಾಳ ವೆಚ್ಚಗಳು | 50.00 | ಕೆ.ಆರ್.ಐ.ಡಿ.ಎಲ್ | 20.00 |
| 12 | ದೇವನಹಳ್ಳಿ ತಾಲ್ಲೂಕು, ಶ್ರೀ ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ . | 2019-20 ಬಂಡವಾಳ ವೆಚ್ಚಗಳು | 200.00 | ಕೆ.ಟಿ.ಐ.ಎಲ್ | 66.00 |
| 13 | ದೇವನಹಳ್ಳಿಯ ಶ್ರೀ ಸಿದ್ಧಾಚಲಂ ಸ್ಥೂಲಭದ್ರಧಾಮ ಜೈನ್ ದೇವಸ್ಥಾನದ ರಸ್ತೆ ಅಭಿವೃದ್ಧಿ ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 2019-20 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ.ಎಲ್ | 75.00 |
| 14 | ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿಯ ಖಾನಿಮಠಕ್ಕೆ ಯಾತ್ರಿನಿವಾಸ ಕಟ್ಟಡ ನಿರ್ಮಾಣ. | 2017-18 ಬಂಡವಾಳ ವೆಚ್ಚಗಳು | 25.00 | ಕೆ.ಆರ್.ಐ.ಡಿ. ಎಲ್ ಬೆಂಗಳೂರು | 15.00 |
| 15 | ನೆಲಮಂಗಲ ತಾಲ್ಲೂಕು, ಸೋಮಪುರ ಹೋಬಳಿ, ದೇವರಹೊಸಹಳ್ಳಿಯಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ. | 2017-18 ಬಂಡವಾಳ ವೆಚ್ಚಗಳು | 25.00 | ಕೆ.ಆರ್.ಐ.ಡಿ. ಎಲ್ ಬೆಂಗಳೂರು | 15.00 |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಟ್ಟು ಮೊತ್ತ | | 400.00 | | 191.00 |
| | ಗ್ರ್ಯಾಂಡ್ ಟೋಟಲ್ | | 1619.24 | | 702.58 |